# ಕರ್ನಾಟಕ ವಿಧಾನ ಪರಿಷತ್ತು

ಸಂ:ಎಲ್.ಸಿ.ಕ್ಯೂ/ಸಿಆರ್/35/2024-25. ದಿನಾಂಕ:22.07.2024.

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 102(908)* |
| ಸದಸ್ಯರ ಹೆಸರು: | ಶ್ರೀ ಎನ್. ರವಿ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ವಿಷಯ: | ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಆಸ್ತಿಯ ಕುರಿತು. |
| ಉತ್ತರಿಸಬೇಕಾದ ದಿನಾಂಕ: | 24.07.2024 |
| ಉತ್ತರಿಸಬೇಕಾದ ಸಚಿವರ ಹೆಸರು: | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |

********

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ: 79 ರಲ್ಲಿ 15ಎಕರ 12 ಗುಂಟೆ ಜಾಗ ಬೆಂಗಳೂರು ನಗರ ತಿಗಳರಪೇಟೆ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿರುವ ಕುರಿತು ಮುಜರಾಯಿ ಇಲಾಖೆಯಲ್ಲಿ ಮಾಹಿತಿ ಇದೆಯೇ; ಪ್ರಸ್ತುತ ಆ ಜಾಗದ ಪಹಣಿಯಲ್ಲಿ ಯಾರ ಹೆಸರು ನಮೂದು ಇದೆ; ಎಷ್ಟು ಜಾಗ ಒತ್ತುವರಿಯಾಗಿದೆ; ಜಾಗ ಒತ್ತುವರಿಗೆ ಸಹಕರಿಸಿದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸದಿರಲು ಕಾರಣವೇನು; (ವಿವರ ನೀಡುವುದು) | ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ: 79 ರಲ್ಲಿ 15ಎಕರ 12 ಗುಂಟೆ ಜಾಗ ಬೆಂಗಳೂರು ನಗರ ತಿಗಳರಪೇಟೆ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿರುವ ಕುರಿತು ಮಾಹಿತಿ ಇದೆ.<br><br>➢ ಪ್ರಸ್ತುತ ನೀಲಸಂದ್ರ ಗ್ರಾಮದ ಯಾವುದೇ ಸರ್ವೆ ನಂಬರ್‌ಗೆ ಗಣಕೀಕೃತ ಪಹಣಿಗಳು ಬರುತ್ತಿಲ್ಲ.<br>➢ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:12850/1989 ಮತ್ತು 12850ಎ ರಿಂದ 12850ಜಿ/1989ರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:12.10.1990ರಂದು ನೀಡಲಾದ ತೀರ್ಪಿನ ನಿರ್ದೇಶನದಂತೆ ತಹಸೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರು ದಿನಾಂಕ:07.12.1992ರಂದು ಮುಜರಾಯಿ ಸಹಾಯಕರು ನಗರ ಸಭಾ ವಲಯ, ಬೆಂಗಳೂರು ಇವರಿಗೆ ಸದರಿ ಜಮೀನನ್ನು ಹಸ್ತಾಂತರಿಸಿರುತ್ತಾರೆ.<br><br>➢ ಮೇಲ್ಕಂಡ ಜಮೀನನ್ನು ಇಲಾಖೆಗೆ ಹಸ್ತಾಂತರಿಸುವ ಪೂರ್ವದಲ್ಲಿಯೇ ಒತ್ತುವರಿ ಇದ್ದು, 2015 ರಲ್ಲಿ ನಡೆಸಲಾದ ಸರ್ವೆ ವರದಿಯನ್ವಯ 211 ಒತ್ತುವರಿದಾರರನ್ನು ಗುರುತಿಸಲಾಗಿದ್ದು, ಸುಮಾರು 6-12 ಎ-ಗು ಪ್ರದೇಶದಲ್ಲಿ ಒತ್ತುವರಿ ಕಂಡು ಬಂದಿರುತ್ತದೆ. ಸದರಿ ಒತ್ತುವರಿದಾರರನ್ನು ತೆರವುಗೊಳಿಸಲು ಮಾನ್ಯ ಕರ್ನಾಟಕ ಭೂ ಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲ್ಮಾಡಲಾಗಿದ್ದು, ಸದರಿ ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br><br>➢ ಪ್ರಶ್ನಿತ ಪ್ರಕರಣಕ್ಕೆ ಸಂಬಂಧಿಸಿದಂತೆ 2011-12ನೇ ಸಾಲಿನಿಂದ 2022-23 ನೇ ಸಾಲಿನವರೆಗೆ ಕರ್ತವ್ಯ ಲೋಪ ಕಂಡು ಬಂದಿರುವ ಹಿನ್ನಲೆಯಲ್ಲಿ ಪ್ರಥಮ ಹಂತದಲ್ಲಿ ಈ ಕೆಳಕಂಡ ಆರು ಜನ ಅಧಿಕಾರಿ/ ನೌಕರರಿಗೆ ಕಾರಣ ಕೇಳಿ ನೋಟೀಸ್‌ನ್ನು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗೆ ಅಧಿಕಾರಿ/ ನೌಕರರು ಲಿಖಿತ ವಿವರಣೆಯನ್ನು ವಿವಿಧ ದಿನಾಂಕಗಳಲ್ಲಿ ಸಲ್ಲಿಸಿದ್ದು, ಈ ಲಿಖಿತ ವಿವರಣೆಗಳ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ಕರ್ತವ್ಯ ಲೋಪ ಎಸಗಿರುವುದು ಸಾಬೀತಾದಲ್ಲಿ |

| | ಪ್ರಶ್ನೆ | ಉತ್ತರ |
|---|---|---|
| | | ಸಂಬಂದಪಟ್ಟ ಅಧಿಕಾರಿ/ ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತದೆ.<br><br>1. ಶ್ರೀ ಎಂ. ಮೋಹನ್ ಕುಮಾರ್<br>2. ಶ್ರೀ ಜೆ. ಪುರುಷೋತ್ತಮ್<br>3. ಶ್ರೀ ಎಂ. ನಾರಾಯಣಸ್ವಾಮಿ<br>4. ಶ್ರೀ ಟಿ. ಸೇಲ್ವಮಣಿ<br>5. ಶ್ರೀಮತಿ ಟಿ. ಎನ್. ಮಂಜುಳಾ<br>6. ಶ್ರೀ ವಿ. ಶ್ರೀನಿವಾಸ ಮೂರ್ತಿ |
| ಆ) | ಗೌರವಾನ್ವಿತ ನ್ಯಾಯಾಲಯವು ಸದರಿ ಜಮೀನು ಮುಜರಾಯಿ ಇಲಾಖೆಗೆ ಸೇರಿದ್ದು ಎಂಬುದಾಗಿ ತೀರ್ಪು ನೀಡಿದ ಬಳಿಕವೂ ಸದರಿ ಜಮೀನನ್ನು ಸರ್ಕಾರ ಮುಜರಾಯಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದಿರಲು ಕಾರಣವೇನು: | ಪ್ರಸ್ತುತ ಖಾಸಗಿ ವ್ಯಕ್ತಿಗಳು ಸದರಿ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವುದರಿಂದ ಸದರಿ ಜಮೀನನ್ನು ಮುಜರಾಯಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ವಿವರವನ್ನು ಪೂರಕ ಟಿಪ್ಪಣಿಯಲ್ಲಿ ಒದಗಿಸಲಾಗಿದೆ. |
| ಇ) | ಪ್ರಸ್ತುತ ಯಾವುದೇ ಒತ್ತುವರಿಯಾಗದ ಖಾಲಿ ಇರುವ ನೂರಾರು ಕೋಟಿ ರೂ ಬೆಲೆ ಬಾಳುವ 7 ಎಕರೆಗೂ ಹೆಚ್ಚು ಜಮೀನಿಗೆ ಕಾಂಪೌಂಡು ಹಾಕಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಕಾಂಪೌಂಡು ಹಾಕಲಾಗುವುದು; ಈ ವಿಳಂಬಕ್ಕೆ ಕಾರಣರಾದ ಎಷ್ಟು ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ (ವಿವರ ನೀಡುವುದು) | ಅಪರ ಜಿಲ್ಲಾಧಿಕಾರಿ ಮತ್ತು ಉಪ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಇವರ ಆದೇಶ ಸಂಖ್ಯೆ:ಡಿವಿಎಸ್(ಬಿ). ಸಿಆರ್.213/2014-15 ದಿನಾಂಕ:15-04-2017ರ ಆದೇಶದನ್ವಯ ಸರ್ವೆ ನಂ.79 ರಲ್ಲಿನ 15-12 ಎ-ಗು ಒತ್ತುವರಿ ಪೈಕಿ ತೆರವುಗೊಳಿಸಲಾಗಿರುವ 9 ಎಕರ ಜಮೀನಿಗೆ ಕಾಂಪೌಂಡ್ ನಿರ್ಮಿಸುವ ಸಲುವಾಗಿ ಕೆ.ಆರ್.ಐ.ಡಿ.ಎಲ್, ರಾಜಾಜಿನಗರ, ಬೆಂಗಳೂರು ರವರು ತಯಾರಿಸಿರುವ ರೂ.80 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಮಂಜೂರಾತಿ ನೀಡಿ ಮೊದಲನೇ ಕಂತಿನ ಬಾಬ್ತು ರೂ.26.00 ಲಕ್ಷಗಳನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುತ್ತದೆ.<br><br>ಸದರಿ ಆದೇಶದಂತೆ ಕಾರ್ಯನಿರ್ವಾಹಕ ಅಧಿಕಾರಿಯವರ ಪತ್ರ ಸಂಖ್ಯೆ:ರಾರಾಥ.ಸಿಆರ್. 138/2006-07 ದಿನಾಂಕ:28-01-2019 ರನ್ವಯ ಕಾಂಪೌಂಡ್ ನಿರ್ಮಾಣ ಕಾಮಗಾರಿಯ ಸಲುವಾಗಿ ಜಮೀನನ್ನು ಕಾರ್ಯಪಾಲಕ ಅಭಿಯಂತರರು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಇವರಿಗೆ ಹಸ್ತಾಂತರಿಸಲಾಗಿರುತ್ತದೆ.<br><br>ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಡಿವಿಎಸ್.(ಎ)ಸಿಆರ್.10/1989-90, ದಿನಾಂಕ: 12/11/2020 ರನ್ವಯ ಸರ್ವೆ ನಂಬರ್ 79ರ ಜಮೀನನ್ನು ಸಂರಕ್ಷಿಸುವ ಸಲುವಾಗಿ ಕಾಂಪೌಂಡ್ ಗೋಡೆಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ನಿರ್ಮಾಣ ಮಾಡಲು ಹಾಗೂ ಈ ಕಾಮಗಾರಿ ಮುಗಿಯುವವರೆವಿಗೂ ಪೊಲೀಸ್ ರಕ್ಷಣೆಯಲ್ಲಿ ಹಾಗೂ ಅಧಿಕಾರಿಗಳ ನೇತೃತ್ವದಲ್ಲಿ ಕಾಂಪೌಂಡ್ ನಿರ್ಮಾಣ ಮಾಡಿ ಆಸ್ತಿಯನ್ನು ಸಂರಕ್ಷಿಸಲು ಕ್ರಮ ವಹಿಸಲು ಸೂಚಿಸಿರುತ್ತಾರೆ<br><br>ಜಿಲ್ಲಾಧಿಕಾರಿಯವರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಡಿವಿಎಸ್.(ಎ) ಸಿಆರ್.10/ 1989-90 ದಿನಾಂಕ:12/11/2020 ರ ಆದೇಶವನ್ನು ಪ್ರಶ್ನಿಸಿ ಶ್ರೀ ತಾಯಪ್ಪ ಹಾಗೂ ಇತರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: WP 13506/2020 ಅನ್ನು ದಾಖಲಿಸಿದ್ದು, |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಮಾನ್ಯ ಉಚ್ಚ ನ್ಯಾಯಾಲಯವು ದಾವಾ ಸ್ವತ್ತಿನ ಬಗ್ಗೆ ಯಥಾಸ್ಥಿತಿಯನ್ನು ಕಾಪಾಡಲು ದಿನಾಂಕ: 07-12-2020 ರಂದು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಸದರಿ ಪ್ರಕರಣವನ್ನು ವಜಾಗೊಳಿಸಲು ಕೋರಿ ಸರ್ಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ದಿನಾಂಕ:22-12-2021 ರಂದು ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸಲಾಗಿರುತ್ತದೆ ಹಾಗೂ ಪ್ರಕರಣವನ್ನು ಬೆಂಬತ್ತಲಾಗುತ್ತಿದೆ. ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ತೀರ್ಪಿಗೆ ಅನುಗಣವಾಗಿ ಕ್ರಮ ಕೈಗೊಳ್ಳಲಾಗುತ್ತದೆ.<br><br>ಪ್ರಸ್ತುತ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಕಾಂಪೌಂಡ್ ನಿರ್ಮಾಣದ ವಿಚಾರದಲ್ಲಿ ವಿಳಂಬವಾಗಿದ್ದು, ಇದರಲ್ಲಿ ಇಲಾಖೆಯ ಅಧಿಕಾರಿಗಳ ಪಾತ್ರವಿರುವುದಿಲ್ಲ.</td></tr>
<tr><td>ಈ)</td><td>ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ವಿವರಗಳೇನು; (ಜಿಲ್ಲಾವಾರು ದೇವಸ್ಥಾನವಾರು ವಿವರ ನೀಡುವುದು)</td><td rowspan="3">ರಾಜ್ಯದಲ್ಲಿನ ಅಧಿಸೂಚಿತ ಸಂಸ್ಥೆಗಳು:<br><table><tr><th>ಕ್ರ. ಸಂ.</th><th>ವರ್ಗ</th><th>ಒಟ್ಟು ಸಂಸ್ಥೆಗಳು</th></tr><tr><td>1.</td><td>"ಎ" ವರ್ಗ</td><td>200</td></tr><tr><td>2.</td><td>"ಬಿ" ವರ್ಗ</td><td>195</td></tr><tr><td>3.</td><td>"ಸಿ" ವರ್ಗ</td><td>34,165</td></tr></table><br>ಪ್ರವರ್ಗ "ಎ" ಮತ್ತು ಪ್ರವರ್ಗ "ಬಿ" ಸಂಸ್ಥೆಗಳಿಗೆ ಸೇರಿದ ಆಸ್ತಿಯನ್ನು ಸರ್ವೆ ಮಾಡಲಾಗಿದೆ. "ಸಿ" ವರ್ಗಕ್ಕೆ ಸೇರಿದ ಸಂಸ್ಥೆಗಳು ಹೆಚ್ಚಿರುತ್ತದೆ.<br><br>ಇವುಗಳನ್ನು ಸರ್ವೆ ಮಾಡಿ, ಗುರುತಿಸುವುದು, ಒತ್ತುವರಿ ತೆರವುಗೊಳಿಸುವುದು, ಅವುಗಳ ಮೌಲ್ಯ ನಿರ್ಧರಿಸುವುದಕ್ಕೆ ಹೆಚ್ಚಿನ ಸಮಯದ ಅವಶ್ಯಕತೆ ಇರುತ್ತದೆ. ಈ ಕಾರ್ಯವು ಪ್ರಗತಿಯಲ್ಲಿರುತ್ತದೆ. ಆದ್ದರಿಂದ ಈ ಅಂಶಗಳಿಗೆ ಸೂಕ್ತ ಮಾಹಿತಿ ಸಂಗ್ರಹಿಸಿ, ಮುಂದಿನ ದಿನಗಳಲ್ಲಿ ಒದಗಿಸಲಾಗುವುದು.</td></tr>
<tr><td>ಉ)</td><td>ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಒಟ್ಟು ಮೌಲ್ಯವೆಷ್ಟು; ದೇವಸ್ಥಾನದ ಜಾಗ ಒತ್ತುವರಿಯಾಗಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಒತ್ತುವರಿ ತೆರವುಗೊಳಿಸಲು ಕೈಗೊಂಡ ಕ್ರಮಗಳೇನು (ವಿವರ ನೀಡುವುದು)</td></tr>
<tr><td>ಊ)</td><td>ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಪಹಣಿ ಮಾಡಲು<br>ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಕಳೆದ ಎರಡು ವರ್ಷದಲ್ಲಿ ಎಷ್ಟು ಎಕರೆ ಭೂಮಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಖಾತೆ, ಪಹಣಿ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)</td></tr>
</table>

RD/86/MSPA/2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು